**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.565/2022</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಲಕ್ಷ್ಮೀ | ಪ್ರಾಸಾ -1 |
| ಗಂಡನ ಹೆಸರು | : ಅವಿನಾಶ್ | ಚಾಸಾ-1 |
| ವಯಸ್ಸು | : 25 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಗೃಹಿಣಿ | ದಿನಾಂಕಃ02.12.2024 |
| ವಾಸಸ್ಥಳ | : ಸಂಸೆ | |

**<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ಗಂಡ. ಚಾಸಾ-6 ನನ್ನ ತಂದೆ. ಚಾಸಾ-7 ನನ್ನ ತಾಯಿ. ಚಾಸಾ-8 ನನ್ನ ದೊಡ್ಡಮ್ಮ. ಚಾಸಾ-9 ನನ್ನ ಚಿಕ್ಕಪ್ಪ. ಚಾಸಾ-10 ರಿಂದ 13 ರವರ ಪರಿಚಯ ನನಗಿದೆ.

ದಿ.28.04.2019 ರಂದು ನನ್ನ ತಂದೆತಾಯಿ ಹಾಗೂ ಗುರುಹಿರಿಯರು ನನ್ನ ಹಾಗೂ ಆರೋಪಿಯ ಮದುವೆಯನ್ನು ಬಾಳೇಹೊನ್ನೂರಿನ ಒಕ್ಕಲಿಗರ ಸಮುಧಾಯ ಭವನದಲ್ಲಿ ಮಾಡಿರುತ್ತಾರೆ. ಮದುವೆ ಸುವಯಕ್ಕೆ ಆರೋಪಿಯು ನನ್ನ ತಂದೆತಾಯಿ ಬಳಿ ರೂ.10 ಲಕ್ಷ ಹಣ ಮತ್ತು 100 ಗ್ರಾಂ ಬಂಗಾರ ಪಡೆದುಕೊಂಡಿದ್ದರು. ಮದುವೆಯಾದ ಸ್ವಲ್ಪ ದಿನಗಳ ನಂತರ ನನ್ನನ್ನು ಆರೋಪಿಯ ಮನೆಯಲ್ಲೇ ಚೆನ್ನಾಗಿ ನೋಡಿಕೊಂಡಿದ್ದು ಆನಂತರ ವರದಕ್ಷಿಣೆ ಹಣ ತೆಗೆದುಕೊಂಡು ಬಾ ಎಂದು ಮಾನಸಿಕ ಹಿಂಸೆ ಕೊಡುತ್ತಿದ್ದರು. ನನ್ನ ಮೊದಲನೇ ಹೆರಿಗೆ ಸಮಯಕ್ಕೆ ನನ್ನನ್ನು ಹೆರಿಗೆಗೆ ಕಳುಹಿಸದೇ ಅವರ ಮನೆಯಲ್ಲಿಯೇ ಇಟ್ಟು ಮಾನಸಿಕ ತೊಂದರೆ ಕೊಟ್ಟರು. ದಿ.20.06.2020 ರಂದು ಎನ್.ಆರ್.ಪುರದ ಪುಷ್ಪಾ ಆಸ್ಪತ್ರೆಯಲ್ಲಿ ಹೆಣ್ಣು ಮಗು ಜನಿಸಿತು. ಆನಂತರ ನನಗೆ ಗಂಡು ಮಗು ಬೇಕು ಎಂದು ಆರೋಪಿ ನನ್ನನ್ನು ಅವಮಾನಿಸಿ ನಾನು ಬೇರೆ ಮದುವೆಯಾಗುತ್ತೇನೆ ಮನೆ ಬಿಟ್ಟು ಹೋಗು ಎಂದು ಹಿಂಸೆ ನೀಡುತ್ತಿದ್ದರು. ಆರೋಪಿಯೊಂದಿಗೆ ಅವರ ತಾಯಿಯೂ ಸಹಾ ಹಿಂಸೆ ನೀಡುತ್ತಿದ್ದರು. ಈ ವಿಷಯವನ್ನು ನನ್ನ ತಂದೆತಾಯಿ ಬಳಿ ಹೇಳಿದಾಗ ಅವರು ನನಗೆ ಸಮದಾನ ಮಾಡಿ, ಚಾಸಾ-6, 7, 10 ಮತ್ತು 11 ರವರು ಆರೋಪಿಗೆ ಬುದ್ದಿ ಹೇಳಿ ಕಳುಹಿಸಿದ್ದರು.

ಹಿಂಸೆಯನ್ನು ಸಹಿಸಿಕೊಂಡಿದ್ದರೂ ಸಹಾ ದಿ.15.02.2021 ರಂದು ನನ್ನ ವಸ್ತು ಮತ್ತು ಒಡವೆಗಳನ್ನು ಕಿತ್ತುಕೊಂಡು ಆರೋಪಿಯು ನನ್ನನ್ನು ಮನೆಯಿಂದ ಹೊರಗೆ ಹಾಕಿದರು. ಆಗ ನನ್ನ ಸಣ್ಣ ಮಗುವನ್ನು ಕರೆದುಕೊಂಡು ನನ್ನ ತಾಯಿಯ ಮನೆಗೆ ಬಂದೆ. ದಿ.07.03.2021 ರಂದು ನಮ್ಮ ಮನೆಯಲ್ಲಿ ಯಾರು ಇಲ್ಲದಾಗ ಆರೋಪಿಯು ಅಲ್ಲಿಗೆ ಬಂದು ಅವಾಚ್ಯ ಶಬ್ದಗಳಿಂದ ಬೈದು ಹಣ ತರದಿದ್ದರೆ ನಮ್ಮ ಮನೆಗೆ ಬರಬೇಡ ಎಂದು ಕೊಲೆ ಬೆದರಿಕೆ ಹಾಕಿದರು. ಆನಂತರ ನನ್ನ ತಂದೆಯ ಮೇಲೂ ಸಹಾ ಹಲ್ಲೆ ಮಾಡಲು ಹೋಗಿದ್ದರು. ಚಾಸಾ-8 ರಿಂದ 11 ರವರು ಗಲಾಟೆ ಬಿಡಿಸಿರುತ್ತಾರೆ. ಮದುವೆ ಸಮಯಕ್ಕೆ

ವರದಕ್ಷಿಣೆ ಪಡೆದಿದ್ದರೂ ಸಹಾ ಆರೋಪಿ ಮತ್ತು ಅವರ ತಾಯಿ ನನಗೆ ಹಿಂಸೆ ನೀಡುತ್ತಿದ್ದರು. ದಿ.09.11.2021 ರಂದು ಆರೋಪಿಯು ಎನ್.ಆರ್.ಪುರ ನ್ಯಾಯಾಲಯದಿಂದ ವಿವಾಹ ವಿಚ್ಛೇಧನಕ್ಕೆ ನೋಟೀಸು ಕಳುಹಿಸಿದರು. ದಿ.24.11.2021 ರಂದು ನಾನು ಕುದುರೆಮುಖ ಪೋಲಿಸ್ ಠಾಣೆಗೆ ಹೋಗಿ ದೂರು ದಾಖಲಿಸಿರುತ್ತೇನೆ. ದಿ.25.11.2021 ರಂದು ಪೋಲಿಸರು ನಮ್ಮ ಮನೆಗೆ ಬಂದು ಸ್ಥಳ ಮಹಜರ್ ಬರೆದು, ಮದುವೆ ಆಮಂತ್ರಣ ಪತ್ರಿಕೆಯನ್ನು ಪಡೆದುಕೊಂಡರು. ಆ ಮಹಜರ್ ನ್ನು ಮ.1.00 ರಿಂದ 2.00 ರವರೆಗೂ ಮಾಡಿದ್ದು ಆ ಸಮಯಕ್ಕೆ ಚಾಸಾ-2 ಮತ್ತು 3 ರವರು ಹಾಜರಿದ್ದರು. ದಿ.26.11.2021 ರಂದು ಆರೋಪಿಯ ಮನೆಗೆ ಹೋಗಿ ಅಲ್ಲಿ ಬೀರುವಿನಲ್ಲಿ ಇದ್ದ ಒಂದು 10 ಗ್ರಾಂ ಕೈಚೈನ್ ಮತ್ತು 2 ಗ್ರಾಂ ರಿಂಗ್ ನ್ನು ವಶಕ್ಕೆ ಪಡೆದರು. ಚಾಸಾ-4 ಮತ್ತು 5 ರವರು ಇದ್ದರು.

ಸಾಕ್ಷಿಯು ದಿ.24.11.2021 ರ ದೂರು, ಪ್ರ.ವ.ವರದಿ, ದಿ.25.11.2021 ರ ಸ್ಥಳ ಮಹಜರ್, ಅದಕ್ಕೆ ಅಡಕಗೊಂಡ ಪೋಟೋಗಳು, ವಿವಾಹ ಆಮಂತ್ರಣ ಪತ್ರಿಕೆ, ದಿ.26.11.2021 ರ ಮಹಜರ್ ಮತ್ತು ಅಡಕಗೊಂಡ ಪೋಟೊವನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಗಳನ್ನು ಸಿಡಿ ಮತ್ತು ಪ್ರಮಾಣಪತ್ರದೊಂದಿಗೆ ನಿಪಿ-1 ರಿಂದ 10, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ರಿಂದ 3(ಎ) ಮತ್ತು 7(ಎ) ಎಂದು ಗುರುತಿಸಲಾಯಿತು.

<u>**ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.